KID: 1/2018
MW:1

<u>ದಿ:16.03.2018 ರಂದು ಸಾಕ್ಷಿಯನ್ನು ಕರೆ ವಿಧಿವತ್ತಾಗಿ ಪ್ರಮಾಣ ಮಾಡಿಸಲಾಯಿತು</u>

**<u>ಪಾಟೀ ಸವಾಲು:</u> ಶ್ರೀಮತಿ ರಶ್ಮಿ ವಕೀಲರಿಂದ ಶ್ರೀ ಎಸ್ ಕೆ ಹೆಚ್ ವಕೀಲರ ಪರವಾಗಿ.**

ವಿಚಾರಣೆ ನಿಗದಿಯಾದ ಬಗ್ಗೆ ಎರಡೂ ಪಕ್ಷಗಳವರಿಗೆ ಆ ಬಗ್ಗೆ ತಿಳಿಸುವುದು ವಿಚಾರಣಾಧಿಕಾರಿಯಾದ ನನ್ನ ಕರ್ತವ್ಯ ಎನ್ನುವುದು ಸರಿ. ವಿಚಾರಣೆಯನ್ನು ದಿ:16.1.2017 ರಂದು ನಿಗದಿ ಮಾಡಲಾಗಿತ್ತು ಎಂದರೆ ಸರಿ. ಸದರ ವಿಚಾರಣಾ ದಿನಾಂಕದ ಬಗ್ಗೆ ಆಪಾದಿತ ನೌಕರರಿಗೆ ಯಾವದೇ ನೋಟೀಸು ಜಾರಿ ಆಗಿಲ್ಲ ಎಂದರೆ ಸರಿ ಆದರೆ ಪುನಃ ಭದ್ರತಾ ಸಿಬ್ಬಂಧಿ ಮೂಲಕ ನೋಟೀಸನ್ನು ಕಳುಹಿಸಿದ್ದೇನ. ನಾನು ಪುನಃ ನೋಟೀಸನ್ನು ಭದ್ರತಾ ಸಿಬ್ಬಂಧಿ ಮೂಲಕ ಕಳುಹಿಸಿದ್ದೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ ಎಂ 11 ಆರ್ಡರ ಶೀಟ್ ಪ್ರಕಾರ ಆಪಾದಿತರು ಯಾವದೇ ಆಪಾದನೆಯನ್ನು ಒಪ್ಪಿಕೊಂಡಿಲ್ಲ ಎಂದರೆ ಸರಿ.

ಆಡಳಿತ ವರ್ಗದವರ ಸಾಕ್ಷ್ಯ ಆದ ಮೇಲೆ ಆಪಾದಿತರು ಸಾಕ್ಷ್ಯ ನೀಡಲು ಅವಕಾಶ ಕೊಡಬೇಕಿತ್ತು ಎಂದರೆ ಆಪಾದಿತರು ಪ್ರಾಥಮಿಕ ವಿಚಾರಣೆ ಆದ ನಂತರ ವಿಚಾರಣೆಗೆ ಹಾಜರಾಗಿರುವುದಿಲ್ಲ. ನಾನು ಸಂಸ್ಥೆಯ ವಿಚಾರಣಾ ನಿಯಮಾವಳಿ ಪ್ರಕಾರ ಯಾವದೇ ಅವಕಾಶಗಳನ್ನು ಆಪಾದಿತರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಂರಕ್ಷಣಾತ್ಮಕ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ನಾನು ಸದರ ಹೇಳಿಕೆಗಾಗಿ 30.6.2017 ರಂದು ದಿನಾಂಕವನ್ನು ಕೊಟ್ಟಿದ್ದರೂ ಸಹ ಆಪಾದಿತರು ಸದರ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ದಿನಾಂಕ:30.6.2017 ರ ನಂತರ ಮತ್ತೊಂದು ಅವಕಾಶವನ್ನು ಸಂರಕ್ಷಣಾತ್ಮಕ ಹೇಳಿಕೆಗೆ ಕೊಡಲು ತೊಂದರೆ ಇರಲಿಲ್ಲವೆಂದರೆ ಆಪಾದಿತರಿಗೆ ಅದಕ್ಕೂ ಮೊದಲಿನ ವಿಚಾರಣೆಯಲ್ಲಿ ಸಾಕಷ್ಟು ಕಾಲಾವಕಾಶವನ್ನು ಕೊಟ್ಟಿದ್ದನು. ಪ್ರಕರಣದ ಮುಕ್ತಾಯವನ್ನು 30.6.2017 ರಂದು ಮಾಡಿದ್ದೇನೆ. ಅದೇ ದಿನ ಸಂರಕ್ಷಣಾತ್ಮಕ ಹೇಳಿಕೆಗೆ ನಿಗದಿ ಮಾಡಿ ಅದೇ ದಿನ ವಿಚಾರಣೆಯನ್ನು ಮುಕ್ತಾಯಗೊಳಿಸಿದ್ದೇನೆ ಎಂದರೆ ಸರಿ. ಆಪಾನದಿತರಿಗೆ ಯಾವದೇ ಕಾಲಾವಕಾಶ ನೀಡದೇ ಆಡಳಿತ ವರ್ಗದವರಿಗೆ ಸಹಾಯ ಮಾಡಲು ಏಕ ಪಕ್ಷೀಯವಾಗಿ ವಿಚಾರಣಾ ಫಲಶೃತಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ:</u> ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿಯಿದೆ

ಅಧ್ಯಕ್ಷಾಧಿಕಾರಿಗಳು

ಕಾರ್ಮಿಕ ನ್ಯಾಯಾಲಯ ಹುಬ್ಬಳ್ಳಿ

KID: 1/2018
MW:1